ಮತ್ತು ತಂಡದ ಬಂಧನ ಮಾತ್ರ."

"ಏಡುಕೊಂಡಲು ಕಿಡ್ನಿ ಮಾರಾಟದ ದಂಧೆ ನಡೆಸ್ತಿದ್ದಾನೆಯೆ?"

"ನಿಸ್ಸಂಶಯವಾಗಿ. ಭಿಕಾರಿ ವೇಷದಲ್ಲಿ ತಿರುಗಾಟ ಮಾಡ್ದಾಗ ಇನ್ನೂ ಕೆಲವು ಸಾಕ್ಷಿಗಳು ಸಿಕ್ಕವು. ಭಿಕ್ಷುಕರ ತಾಣಕ್ಕೆ ಭೇಟಿ ನೀಡಿದ್ದೆ. ಕಳೆದ ಒಂದು ವರ್ಷದಲ್ಲಿ ಮೂವರು ಭಿಕ್ಷುಕರು ಕಾಣೆಯಾಗಿದ್ದಾರಂತೆ. ನಲ್ಲತಂಬಿಯನ್ನು ಅಲ್ಲಿ ಕೆಲವರು ಗುರುತಿಸಿದ್ರು. ಕಾಣೆಯಾದವರೆಲ್ಲರ ಜೊತೆಗೂ ಒಮ್ಮೆಯಾದ್ರೂ ನಲ್ಲತಂಬಿ ಕಾಣಿಸಿಕೊಂಡಿದ್ದನಂತೆ! ಅಂದ್ರೆ ನಲ್ಲತಂಬಿ ಕುಡಿತಕ್ಕೆ ಜನರನ್ನು ಕರೆದುಕೊಂಡು ಹೋಗೋ ಕೆಲ್ಸ ಮಾಡ್ತಿದ್ದ ಅನ್ನೋದರಲ್ಲಿ ಅನುಮಾನವಿಲ್ಲ..."

"ಕರಮಚಂದ, ನಿನ್ಗೆ ಕಿಡ್ನಿ ಕದ್ದಿರಬಹುದು ಅಂತ ಯಾವಾಗ ಖಚಿತವಾಯ್ತು?"

"ಏಡುಕೊಂಡಲುವಿನ ಮನೆಯಲ್ಲಿದ್ದ ಮಿಲಿಟರಿ ಫೋಟೋಗಳು, ಮೆಡಲುಗಳು. ಅವೆಲ್ಲವೂ ನಕಲಿ ಎಂದು ನನ್ಗೆ ತಕ್ಷಣ ಗೊತ್ತಾಯಿತು. ಟೆಲಿಫೋನ್ ಪಕ್ಕದ ಪುಸ್ತಕದಲ್ಲಿದ್ದ ಬರಹಗಳು... ನರ್ಸ್ ಬರೆದುಕೊಂಡ ಸೂಚನೆಗಳು! ಅದನ್ನು ವೈದ್ಯ ಫೋನ್ ಮೂಲಕ ತಿಳಿಸಿರಬೇಕು!! ಅಲ್ಲಿ ಕೆಲವು ಮಾತ್ರೆಗಳ ಹೆಸರುಗಳೂ ಬರೆದಿದ್ದವು... ಅವು ಕಿಡ್ನಿ ಪೇಶೆಂಟಿಗೆ ಶಸ್ತ್ರಚಿಕಿತ್ಸೆಗೆ ಮುನ್ನ ನೀಡಲಾಗುವ ಮಾತ್ರೆಗಳು! ರುದ್ರಮುನಿಯ ಮನೆಯಲ್ಲೂ ಅಂತಹ ಮಾತ್ರೆಗಳು ದೊರಕಿದ್ದವು!... ಜೊತೆಗೆ ಆ ನೆಲಮಾಳಿಗೆ!"

"ಚಿನ್ನಪ್ಪ ಹೇಳಿದ್ದ ಸೂಜಿ ಚುಚ್ಚದ ಗುರುತುಗಳು ಏನವು?"

"ನನ್ನ ಊಹೆಯಂತೆ ಅವು ಪ್ರಾಥಮಿಕ ಪರೀಕ್ಷೆಗಳಿಗಾಗಿ ರಕ್ತ ತೆಗೆದಾಗ ಆದಂತಹ ಗುರುತುಗಳು. ಕಿಡ್ನಿ ತೆಗೆಯುವ ಮೊದಲು ಆತನ ಮೂತ್ರಪಿಂಡಗಳು ಆರೋಗ್ಯಕರವಾಗಿವೆಯೇ ಅಂತ ಖಚಿತ ಪಡಿಸಿಕೊಳ್ಳಲು ಕೆಲವು ಪರೀಕ್ಷೆ ಮಾಡ್ತಾರೆ. ಟಿಶ್ಯೂ ಟೈಪಿಂಗ್, ಕ್ರಾಸ್ ಮ್ಯಾಚಿಂಗ್ ಅಂತ ಅನೇಕ ಪರೀಕ್ಷೆಗಳಿವೆ. ಅವುಗಳನ್ನು ಬಹುಶಃ ಚಿನ್ಮಯ ಆಸ್ಪತ್ರೆಯಲ್ಲಿ ಮಾಡಿರಬೇಕು. ಯಾಕಂದ್ರೆ ಆತನ ಮನೆಲಿ ಡಿಪ್ಲೋಮ್ಯಾಟ್ ಬಾರ್ ಬಿಲ್ಲಿನ ದಿನಾಂಕ ಹೊಂದಾಣಿಯಾಗುತ್ತೆ. ಅದು ಚಿನ್ಮಯ ಆಸ್ಪತ್ರೆ ಹತ್ರ ಇರೋದು... ಹಾಂ, ಇಲ್ಲೇ ಎಡಕ್ಕೆ ತಿರುಗಿಸಿ... ಇಲ್ಲೇ ಸ್ವಲ್ಪ ದೂರ..."

"ಮತ್ತೆ ನಲ್ಲತಂಬಿ ರುದ್ರಮುನಿಯನ್ನು ಹುಡುಕಿಕೊಂಡು ಬಂದಿದ್ದನಂತಲ್ಲ..."

"ಅದು ಕೇವಲ ನಾಟಕ! ತಮ್ಮ ಮೇಲೆ ಅನುಮಾನ ಬರದೇ ಇರಲಿ ಅಂತ..."

ಕೆಲಕ್ಷಣಗಳಲ್ಲಿ ನಮ್ಮ ಜೀಪು ಬಾಳೇಕಾಡ್ ಎಸ್ಟೇಟಿನ ಎದುರು ನಿಂತಿತು. ಬಾಗಿಲ ಕರೆಗಂಟೆ ಅದುಮಿದ ಕೆಲ ಹೊತ್ತಿನ ನಂತ್ರ ಕದ ತೆರೆದ ಏಡುಕೊಂಡಲು, ಎದುರಿಗಿದ್ದ ಪೊಲೀಸ್ ಕಂಡು ದಂಗಾದ.

---

## ರವಿರಾಜ ಬೈಕಂಪಾಡಿ

ಮಂಗಳೂರಿನಲ್ಲಿ ಲೆಕ್ಕಪರಿಶೋಧಕರಾಗಿರುವ ರವಿರಾಜ ಅವರ ಮೊದಲ ಪತ್ತೆದಾರಿ ಕತೆ 'ಭವಿಷ್ಯ' ಪ್ರಕಟವಾಗಿದ್ದು 'ಸುಧಾ' ವಾರಪತ್ರಿಕೆಯಲ್ಲಿ. ಪತ್ರಿಕೆಗಳಲ್ಲಿ ಸುಮಾರು ನಲವತ್ತಕ್ಕೂ ಹೆಚ್ಚು ಕತೆಗಳು ಪ್ರಕಟಗೊಂಡಿವೆ. ಪತ್ತೆದಾರಿ ಕಿರು ಕಾದಂಬರಿ 'ಅದಲು–ಬದಲು' ವಾರಪತ್ರಿಕೆಯೊಂದರಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದೆ. ನೀಳ್ಗತೆಗಳೂ ಬೆಳಕು ಕಂಡಿವೆ. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್‌ನಲ್ಲಿ ವಾಸವಾಗಿದ್ದಾರೆ.